# ಹೂವಿನ ಜೊತೆ ಹೂಗಳ ಕಲಿಕೆ

**ಪ್ಲಾಸ್ಟಿಕ್ ವಿಮಾನದ ಮೂಲಕ ಮಕ್ಕಳು ಕಲಿಯುವುದಕ್ಕಿಂತಲೂ ಹೆಚ್ಚಿನದನ್ನು ತೋಟದಲ್ಲಿನ ಹೂ ಮತ್ತು ದುಂಬಿಯನ್ನು ನೋಡಿ ಕಲಿಯಬಲ್ಲರು.**

■ ಸ್ವಯಂಪ್ರಭಾ



ಜೋರು ಸುರಿಯುವ ಮಳೆ ಆಗಷ್ಟೇ ನಿಂತಿತ್ತು. ಮನೆಯೊಳಗೇ ಕುಳಿತು ಕುಳಿತೂ ದಣಿದ ಪುಟ್ಟಮ್ಮ ನಿಧಾನವಾಗಿ ಹೆಜ್ಜೆ ಇಡುತ್ತ ಹೊರಬಂದಳು. ಮೂರುದಿನಗಳ ನಿರಂತರ ಮಳೆ. ಹೊರಗಿನ ಗಾಳಿಯೂ ಮನೆಯೊಳಗೆ ಪ್ರವೇಶಿಸದಷ್ಟು ನಿರಂತರ ಸುರಿದ ಮಳೆಗೆ ತುಸು ಬಿಡುವು ದೊರೆತದ್ದೇ, 'ಸೂರ್ಯದೇವ ಕಾಣುತ್ತಾನಾ' ಎಂದು ಆಕಾಶ ನೋಡುತ್ತ ಅಮ್ಮನೂ ಹೊರಬಂದಳು. ಮೂರುವರೆ ವರ್ಷಗಳ ಪುಟ್ಟಿಗೂ ಅಮ್ಮ ಮಾಡಿದಂತೆ ತಾನೂ ಮಾಡುವುದೆಂದರೆ ಖುಷಿ. ಅವಳೂ ಅಮ್ಮನದ್ದೇ ಚಪ್ಪಲಿ ಮೆಟ್ಟಿ, ಮನೆಯಿಂದಾಚೆ ಬಂದು ಹಣೆಗೆ ಕೈಇಟ್ಟು ಆಕಾಶ ನೋಡಿದಳು.

ಅಮ್ಮ ಕೇಳಿದಳು.

'ಸೂರ್ಯ ಬಂದನಾ ಪುಟ್ಟೀ?'

ಮಗಳೂ ಕೇಳಿದಳು. 'ಶೂಯ ಬಂದನಾ... ಉಮ್‌ಉಮ್...?'

ಹಿತ್ತಿಲ ಬದಿಯಲ್ಲಿ ಹುಲುಸಾಗಿ ಬೆಳೆದ ದೊಡ್ಡ ಕೆಸುವಿನೆಲೆಯನ್ನು ಕೊಯ್ದು, ಅದರ ಸೊನೆಯೆಲ್ಲಾ ಹೋಗುವಂತೆ ಇರಿಸಿದಳು ಅಮ್ಮ. ಅದರೊಳಗೆ ಹಳದಿ ಬಣ್ಣದ ಮಿಠಾಯಿ ಹೂ, ನೀಲಿ ಬಣ್ಣದ ಶಂಖಪುಷ್ಪ, ಬಿಳಿಯ ಮಲ್ಲಿಗೆ, ಕೆಂಪು ದಾಸವಾಳಗಳನ್ನು ರಾಶಿ ಹಾಕಿ ಪುಟ್ಟಮ್ಮನ ಕೈಯಲ್ಲಿ ಇರಿಸಿದಳು. ತನ್ನ ತೆಕ್ಕೆ ತುಂಬಾ ಹೂವಿನ ರಾಶಿ ನೋಡಿದ ಪುಟ್ಟಮ್ಮನಿಗೆ ಖುಷಿಯಾಗಿ ಮನೆಯೊಳಗೆ ಬಂದು ಕುಳಿತಳು. ಈಗ ಮತ್ತೆ ಅಮ್ಮನ ಪ್ರಶ್ನೆ ಶುರು.

'ವಿಚ್ ಕಲರ್ ಈಸ್ ದಿಸ್?'

ಮಿಠಾಯಿ ಹೂ ಹಿಡಿದ ಪುಟ್ಟಿ ಹೇಳಿದಳು 'ಲಲ್ಲೋ.'

ಹಸಿರು ಎಲೆಯ ತೋರಿಸಿದಾಗ, 'ಗುಯೀ (ಗ್ರೀನ್) ಕಲರ್' ಎಂದರೆ, ಮಲ್ಲಿಗೆ ನೋಡುತ್ತ 'ವೈಟ್ ವೈಟ್ ವೈಟ್' ಎಂದು ಚಪ್ಪಾಳೆ ತಟ್ಟಿ ಕುಣಿದಳು. ದಾಸವಾಳವಂತೂ 'ಲೆಡ್ ಲೆಡ್ ಲೆಡ್.'

ಅಮ್ಮ ಮಗುವಿನ ನಡುವೆ ನಡೆಯುವ ಈ ಹೂವಿನಂತಹ ಕಲಿಕೆ, ಜಗತ್ತಿನ ಸುಂದರ ಕ್ಷಣಗಳಲ್ಲಿ ಒಂದು ಅಲ್ಲವೇ. ಜಗತ್ತಿನ ಎಲ್ಲ ಕಂದಮ್ಮಗಳೂ ಇಂತಹ ಕಲಿಕೆಯನ್ನು ಇಷ್ಟಪಡುತ್ತವೆ. ತಾವು ಬಣ್ಣಗಳನ್ನು ಕಲಿತಿದ್ದೇವೆ ಎಂಬ ಅರಿವೇ ಇಲ್ಲದಷ್ಟು ಖುಷಿಯಿಂದ ಅವರು ಬಣ್ಣಗಳನ್ನು ಕಲಿತಾಗಿರುತ್ತದೆ. ಅಷ್ಟೇ ಅಲ್ಲ, ಇಂತಹ ಮಾದರಿಯ ವಿದ್ಯಾಭ್ಯಾಸದಲ್ಲಿ ತಾವು ಕಲಿತುದನ್ನು ಬದುಕಿಗೆ, ಪ್ರಕೃತಿಗೆ ಅನ್ವಯಿಸಿಕೊಳ್ಳುವುದನ್ನೂ ಅವರು ಅರಿತಿರುತ್ತಾರೆ. ಆದರೆ ಈ ಅವಕಾಶಗಳು ಎಷ್ಟು ಮಂದಿ ಮಕ್ಕಳಿಗೆ ದೊರೆಯುತ್ತದೆ? ಎಷ್ಟೋ ಕಡೆ ಹಳ್ಳಿಯ ವಾತಾವರಣ ಇದ್ದರೂ, ಪ್ಲಾಸ್ಟಿಕ್ಕಿನ, ಬ್ಯಾಟರಿ ಚಾಲಿತ ಆಟಿಕೆಗಳನ್ನೇ ಮಕ್ಕಳಿಗೆ ಕೊಟ್ಟು ಕಲಿಸುವುದು ಪ್ರತಿಷ್ಠೆಯ ವಿಷಯವೆಂದು ಅಮ್ಮಂದಿರು ಭಾವಿಸುತ್ತಾರೆ. ನಿಸರ್ಗ ಮತ್ತು ಕಲಿಕೆಯನ್ನು ಜೊತೆಯಾಗಿ ಕೊಂಡೊಯ್ಯುವ ಕೌಶಲವನ್ನು ಮೊದಲಾಗಿ ಅಮ್ಮಂದಿರಿಗೇ ಹೇಳಿಕೊಡಬೇಕಾಗಿದೆ ಎನಿಸುತ್ತದೆ.

ಕಳೆದ ಜುಲೈ 30ರಂದು 'ಯುನಿಸೆಫ್' (United Nations Children's Fund) ವರದಿಯೊಂದನ್ನು ಬಿಡುಗಡೆ ಮಾಡಿತು. 'ಪ್ಯೂರ್ ಅರ್ಥ್' ಸಂಸ್ಥೆಯ ಸಹಯೋಗದಲ್ಲಿ ನಡೆದ ಈ ಅಧ್ಯಯನ ವರದಿಯು, ಜಗತ್ತಿನಲ್ಲಿರುವ ಮಕ್ಕಳ ಸಂಖ್ಯೆಯಲ್ಲಿ ಮೂರನೇ ಒಂದರಷ್ಟು (80 ಕೋಟಿ ಮಕ್ಕಳು) ಮಕ್ಕಳು ಸೀಸದ ವಿಷವನ್ನು ಸೇವಿಸಿರುತ್ತಾರೆ ಎಂದು ವಿವರಿಸುತ್ತದೆ. ಆ ಪೈಕಿ 27.6 ಕೋಟಿ ಮಕ್ಕಳು ಭಾರತದವರು. ಮಕ್ಕಳ ದೇಹದೊಳಗೆ ಸೀಸದ ಅಂಶ ಹೆಚ್ಚಾದರೆ, ಅಂದರೆ ಒಂದು ಡೆಸಿಲೀಟರ್ ರಕ್ತದಲ್ಲಿ ಐದು ಮೈಕ್ರೋಗ್ರಾಂಗಿಂತ ಹೆಚ್ಚಿದ್ದರೆ, ಆಗ ಅವರ ಮಾನಸಿಕ ಬೆಳವಣಿಗೆ ಕುಂಠಿತವಾಗುತ್ತದೆ. ಉತ್ತಮ ನಡವಳಿಕೆ ರೂಢಿಸಿಕೊಳ್ಳುವುದು ಕಷ್ಟವಾಗಿ, ಹಿಂಸೆ–ಕ್ರೌರ್ಯವನ್ನು ಮೆಟ್ಟಿನಿಲ್ಲುವುದು ಅವರಿಗೆ ಕಷ್ಟವಾಗಬಹುದು.

ಸೀಸವು ಮಕ್ಕಳ ದೇಹದೊಳಗೆ ಹೇಗೆ ಪ್ರವೇಶಿಸುತ್ತದೆ? ಮಕ್ಕಳಿಗೆ ನೀಡುವ ಆಟಿಕೆಗಳ ಪೈಕಿ ಹೆಚ್ಚಿನವುಗಳಿಗೆ ಬಳಸುವ ಬಣ್ಣಗಳಲ್ಲಿ ಸೀಸದ ಅಂಶ ಹೆಚ್ಚಿರುವುದುಂಟು. ಅಂತಹ ಆಟಿಕೆಗಳು, ಅಥವಾ ಹಳೆಯ ಆಟಿಕೆಗಳು ಮಕ್ಕಳ ದೇಹದೊಳಗೆ ಸೀಸದ ಅಂಶ ಸೇರುವಂತೆ ಮಾಡುತ್ತವೆ. ಆಟಿಕೆಗಳಿಂದ ಬಣ್ಣವು ಪದರದಂತೆ ಪುಡಿಯಾಗಿ ಉದುರುತ್ತಿದ್ದರೆ ಅಂತಹ ಆಟಿಕೆಗಳನ್ನು ಮಕ್ಕಳ ಕೈಗೆ ಕೊಡಲೇಬಾರದು. ಆದ್ದರಿಂದ ಮೂರು ವರ್ಷದೊಳಗಿನ ಮಕ್ಕಳಿಗೆ ಪ್ಲಾಸ್ಟಿಕ್ ಆಟಿಕೆಗಳನ್ನು ಕೊಡದೇ ಇರುವುದು ಒಳಿತು.

ಎಷ್ಟೋ ಕಡೆಗಳಲ್ಲಿ ಕುಂಕುಮದ ಬದಲಿಗೆ ಕೆಂಪು ಬಣ್ಣದ ಹುಡಿ ಬಳಸವುದುಂಟು. ಅಂತಹ ಹುಡಿಯನ್ನು ಸಿಂಧೂರ ರೂಪದಲ್ಲಿ ಅಥವಾ ಹೋಳಿ ಆಟಕ್ಕೆ ಬಳಸುವುದು ಸರಿಯಲ್ಲ. ವಾಹನಗಳ ಸಂಖ್ಯೆ ಹೆಚ್ಚಿದಂತೆ ಅವುಗಳ ಬ್ಯಾಟರಿ ವಿಲೇವಾರಿ ಪ್ರಕ್ರಿಯೆಯಲ್ಲಿ ಸೀಸವು ಭೂಮಿಗೆ ಸೋರುವುದರಿಂದ, ಕಾರ್ಖಾನೆಗಳ ತ್ಯಾಜ್ಯವು ಭೂಮಿಯನ್ನು ಸೇರಿದಾಗ ನೀರು ಕಲುಷಿತಗೊಳ್ಳುವುದರಿಂದಲೂ ಸತುವಿನ ಅಂಶ ದೇಹ ಸೇರುವ ಸಾಧ್ಯತೆ ಇರುತ್ತದೆ.

ಮಕ್ಕಳಿಗೆ ಆಟಿಕೆಗಳನ್ನು ಕೊಡಿಸುವುದೆಂದರೆ ದೊಡ್ಡವರ ಪಾಲಿಗೆ ಪ್ರತಿಷ್ಠೆಯ ವಿಷಯವಾಗುವುದುಂಟು. ಈ ಪ್ರತಿಷ್ಠೆಯಿಂದ ದೂರಾಗಿ ಮನೆಯಲ್ಲಿ, ಹಿತ್ತಿಲಲ್ಲಿ ಲಭ್ಯ ಇರುವ ವಸ್ತುಗಳೊಡನೆಯೇ ಮಕ್ಕಳು ಬೆಳೆದರೆ ಚಂದ. ಬ್ಯಾಟರಿ ಚಾಲಿತ ವಿಮಾನವೇ ಇದ್ದರೂ, ಮಕ್ಕಳು ಅಮ್ಮ ಮಾಡುವ ಚಪಾತಿ ಹಿಟ್ಟು ಮತ್ತು ಲಟ್ಟಣಿಗೆಯೊಡನೆ ಆಡಲು ಬಯಸುತ್ತವೆ. ಸಾವಿರಾರು ರೂಪಾಯಿಯ ವಿಮಾನಕ್ಕಿಂತ, ನೂರು ರೂಪಾಯಿಯ ಚಪಾತಿ ಹಿಟ್ಟು ಅಥವಾ, ಒಂದು ಕೆಜಿ ಆವೆಮಣ್ಣಿನಿಂದ ಮಕ್ಕಳೇ ತಯಾರಿಸುವ ಹಾವು, ಬೆಕ್ಕು, ಕಾಗೆಯ ಪ್ರತಿಕೃತಿಗಳು ಅವರ ಮನಸ್ಸನ್ನು ಹೆಚ್ಚು ಅರಳಿಸಬಲ್ಲವು. ■